


# ಶಿಕ್ಷಣದಲ್ಲಿ ಮೌಲ್ಯಗಳು

❑ ಡಾ. ವಸಂತ ಕುಮಾರ್

**ವಿಶ್ವವಿದ್ಯಾನಿಲಯ ಮಟ್ಟದ ಶಿಕ್ಷಣದಲ್ಲಿ (ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು) ದೀರ್ಘಕಾಲ ಕೆಲಸ ಮಾಡುತ್ತಿರುವ ಲೇಖಕರು ಶಿಕ್ಷಣದ ಬಗೆಗಿನ ತಮ್ಮ ಚಿಂತನೆಗಳನ್ನು ಹಿಂದಿನ ಸಂಚಿಕೆಯಿಂದ ಮುಂದುವರಿಸುತ್ತ ಶಿಕ್ಷಣದಲ್ಲಿ ಆಗತ್ಯವಾಗಿರಬೇಕಾದ ಮೌಲ್ಯಗಳನ್ನು ಪ್ರಸ್ತಾಪಿಸುತ್ತಿದ್ದಾರೆ.**

ಹಿಂದಿನ ಲೇಖನದಲ್ಲಿ ಶಾಲಾಶಿಕ್ಷಣ ಮತ್ತು ವಿಶ್ವವಿದ್ಯಾನಿಲಯದ ಶಿಕ್ಷಣವನ್ನು ವಿವರಿಸಿ ಹೋಲಿಸಿರುವುದು ಓದುಗರಿಗೆ ಸೋಜಿಗವೂ ಬೇಸರವೂ ಚರ್ವಿತಚರ್ವಣವೂ ಆಗಿರಬಹುದು. ಆದರೆ, ಇದನ್ನು ಮಾಡುವುದರಲ್ಲಿ ಒಂದು ಉದ್ದೇಶವಿದೆ. ವಿದ್ಯಾರ್ಥಿಗಳಿಗೆ ಸಾಮಾನ್ಯವಾಗಿ ತಾವು ಪ್ರತಿನಿತ್ಯ ಶಾಲೆಗೆ ಹೋಗುತ್ತಿರುವುದು ಏತಕ್ಕೆ ಎಂಬುದು ತಿಳಿದಿರುವುದಿಲ್ಲ. ಅವರು ಮನೆಯಲ್ಲೇ ಇದ್ದರೆ ಧ್ವಂಸ ಮಾಡುವರು, ಆದಕಾರಣ ಅವರನ್ನು ಮನೆಯಲ್ಲಿ ಇರಲು ಬಿಡದೆ ಶಾಲೆಗೆ ಅಟ್ಟಿರುವರು ಎಂದು ಕಾಣುವುದು. ಅವರನ್ನು ಶಾಲೆಯಲ್ಲಿ ನೋಡಿದಾಗ. ಶಾಲೆಯ ಸಾಂಪ್ರದಾಯಿಕ ಶಿಕ್ಷಣದಲ್ಲಿ ಹೇಳಿಕೊಡುವ ಪಾಠಗಳು ಅವರಿಗೆ ಮತ್ತೆಲ್ಲಿಯೂ ಸಿಗುವುದಿಲ್ಲ. ಸಿಗುವುದಾದರೆ ಮತ್ತು ಅವರಿಗೆ ಇದು ಬೇಡವಾದರೆ ಅವರು ಹೋಗಬಹುದು. ಅಷ್ಟು ವಿಷಯಗಳನ್ನು ಅಷ್ಟು ಅಲ್ಪಕಾಲದಲ್ಲಿ ಯಾರೂ ತಾವೇ ಕಲಿಯಲಾಗುವುದಿಲ್ಲ. ಉಪಾಧ್ಯಾಯರು ಹೇಳಿಕೊಡುವುದರಿಂದ ಇದು ಸಾಧ್ಯವಾಗುವುದು.

ಉಚ್ಚ ತರಗತಿಯ ವಿದ್ಯಾರ್ಥಿಗಳು ತಿಳಿಯಬೇಕಾದ ಮುಖ್ಯ ವಿಷಯವೆಂದರೆ ತರಗತಿಯಲ್ಲಿ ಹೇಳಿಕೊಡುವ ಪಾಠಗಳು ನೇರವಾಗಿ ಪ್ರತ್ಯಕ್ಷ ಜೀವನಕ್ಕೆ ಸಂಬಂಧಿಸಿರುವುವು. ಪ್ರತಿಪಾಠವೂ ಒಂದು ಸಮಸ್ಯೆಗೆ ಪರಿಹಾರ. ಸಮಸ್ಯಾಪರಿಹಾರ ವಿಧಾನಗಳನ್ನೇ ಕ್ರಮವಾಗಿ ಪ್ರತಿಪಾದಿಸುವುದು, ತರಗತಿಗಳಲ್ಲಿ. ಈ ಪರಿಹಾರಗಳು ಅನೇಕ ಸಮಸ್ಯೆಗಳನ್ನು ಬಿಡಿಸಿರುವುದರಿಂದಲೇ ಅವು ಪಠ್ಯಪುಸ್ತಕಗಳಲ್ಲಿ ಸೇರಿರುವುದು. ತರಗತಿಯಲ್ಲಿ ಹೇಳಿಕೊಡಲಾಗುವ ವಿಷಯಗಳನ್ನು ವಿದ್ಯಾರ್ಥಿಗಳು ಮುಂದೆ ಜೀವನದಲ್ಲಿ ಉಪಯೋಗಿಸಬೇಕಾಗುವುದು. ಜೀವನಕ್ಕೆ ಉಪಯೋಗವಿಲ್ಲದ ಶಿಕ್ಷಣ ವ್ಯರ್ಥ. ಆದುದರಿಂದ ವಿದ್ಯಾರ್ಥಿಗಳು ಜ್ಞಾನವನ್ನು ಪಡೆಯಲೋಸುಗ ಶಾಲೆಗೆ ಹೋಗುವುದು. ಅಂದಿನವರೆಗೆ ಅವರು ಕಲಿತಿರುವುದೆಲ್ಲವೂ ಇಂದು ಅವರು ಕಲಿಯಬೇಕಾದ ಪಾಠಕ್ಕೆ ಸಿದ್ಧತೆ, ಅಡಿಪಾಯ. ಶಾಲೆ, ಪದವಿ ಶಿಕ್ಷಣದ ಪಾಠಗಳನ್ನು ಶ್ರದ್ಧೆಯಿಂದ ಕಲಿಯದೆ ಉಚ್ಚ ತರಗತಿಗಳಿಗೆ ಬಂದು ಕುಳಿತಿರುವುದರಿಂದ ಅವರಿಗೆ ಮೇಲ್ಮಟ್ಟದ ಪಾಠಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲದೆ, ಶಾಲಾ ಶಿಕ್ಷಣವನ್ನೇ ಅರ್ಥಹೀನವೆಂದು ಹಳಿಯುತ್ತಾ ಅಡ್ಡದಾರಿ ಹಿಡಿಯುತ್ತಿರುವುದು.

ಹಿಂದಿನ ಪಾಠಗಳನ್ನು ಸರಿಯಾಗಿ ಕಲಿಯದಿದ್ದರೆ ಮುಂದಿನ ಪಾಠಗಳು ಅರ್ಥವಾಗುವುದಿಲ್ಲ. ಅರ್ಥವಾಗದ ವಿಷಯವನ್ನು ಉಪಯೋಗಿಸಲು ಬಾರದೆ ವಿದ್ಯಾಭ್ಯಾಸ ವ್ಯರ್ಥವಾಗಿ ಜೀವನ ಕಷ್ಟತರವೂ ಅರ್ಥಹೀನವೂ ಆಗುವುದು. ವಿಶ್ವವಿದ್ಯಾನಿಲಯಗಳು ಉನ್ನತ ವ್ಯಾಸಂಗದ ಕೇಂದ್ರಗಳು. ಅಲ್ಲಿಯವರೆಗೆ ನಾವು ಕಲಿತಿರುವ ಪಾಠಗಳು ಜೀವನದ ಸಮಸ್ಯೆಗಳನ್ನು ಎದುರಿಸಲು ಸಾಲದಾಗುವುದರಿಂದಲೇ ವಿಶ್ವವಿದ್ಯಾನಿಲಯ ಮಟ್ಟದ ವಿದ್ಯಾಭ್ಯಾಸ ಬೇಕಾಗಿರುವುದು. ಅವನ್ನು ಸಾರ್ಥಕವಾಗಿ ಬಳಸಲು ಅಸಮರ್ಥರಾದ ವ್ಯಕ್ತಿಗಳಿಂದ, ಅವು ಹೆಸರಿನ ಮುಂದೆ ಭೂಷಣಕ್ಕಾಗಿ ಇರುವುವೆಂಬ ಅಪಹಾಸ್ಯಕ್ಕೆ ಗುರಿಯಾಗಿರುವುವು.

ಯಾರಿಗೆ ಉನ್ನತ ಶಿಕ್ಷಣ ಕಷ್ಟವೋ ಅಲಭ್ಯವೋ ಅವರು ಸಾಮಾನ್ಯ ಶಿಕ್ಷಣವನ್ನು ಪಡೆದು ತಮ್ಮ ಸೇವೆಯನ್ನು ನಿಸ್ಪೃಹವಾಗಿ ಸಮಾಜಕ್ಕೆ ನೀಡಬಹುದು. ಅದು ಗೌರವಾನ್ವಿತ ಮತ್ತು ಶ್ಲಾಘನೀಯ. ಯಾರು ಉನ್ನತ ವ್ಯಾಸಂಗದ ಪ್ರಯೋಜನವನ್ನು ಸಮಾಜಕ್ಕೆ ನೀಡದೆ, ಅಜೀರ್ಣವಾದ ವಿದ್ಯೆಯಿಂದ ಇತರರನ್ನು ಬಳಲಿಸುತ್ತಿರುವರೋ ಅವರು, ಅದರಿಂದ ಉಂಟಾಗುತ್ತಿರುವ ಸಮಸ್ಯೆಗಳಿಗೂ, ಸಮಾಜದ ಪ್ರಗತಿ ಕುಂಠಿತವಾಗುತ್ತಿರುವುದಕ್ಕೂ ಮತ್ತು ಶಿಕ್ಷಣದ ಮೌಲ್ಯಗಳು ಕ್ಷೀಣವಾಗುತ್ತಿರುವುದಕ್ಕೂ ಒಂದು ದೃಷ್ಟಿಯಿಂದ ಕಾರಣರಾಗುತ್ತಿರುವರು. ಈ ಸಮಸ್ಯೆಗೆ ಶಿಕ್ಷಣದ ತತ್ತ್ವಗಳನ್ನು ಅರ್ಥ ಮಾಡಿಕೊಳ್ಳುವುದೇ ಪರಿಹಾರ.

### ಶಿಕ್ಷಣ ಪದ್ಧತಿ

ನಮ್ಮ ದೇಶದ ವಿದ್ಯಾಭ್ಯಾಸದ ವಿಷಯ ಪ್ರಸ್ತಾಪಕ್ಕೆ ಬಂದಾಗಲೆಲ್ಲಾ ಎಲ್ಲರೂ, ಅವರು ಯಾವ ಕಾರ್ಯಕ್ಷೇತ್ರಕ್ಕೆ ಸಂಬಂಧಪಟ್ಟವರಾಗಿರಲಿ, ಯಾವ ಸಾಮಾಜಿಕ ಮಟ್ಟದವರಾಗಿರಲಿ, ತಂದೆತಾಯಿಗಳಾಗಿರಲಿ ಅಥವಾ ವಿದ್ಯಾರ್ಥಿಗಳಾಗಿರಲಿ, ಹಿಂದಿನ ಕಾಲದವರಾಗಲಿ ಇಂದಿನವರಾಗಲಿ, ನಮ್ಮ ಶಿಕ್ಷಣ ಪದ್ಧತಿ ಬದಲಾಗಬೇಕೆಂದು ಒಕ್ಕೊರಲಿನಿಂದ ಹೇಳುವರು. ಇದು ನಿಜ ಮತ್ತು ಅಪೇಕ್ಷಣೀಯ. ಅನೇಕ ವೇಳೆ ನಮ್ಮ ದೇಶದಲ್ಲಿ ಆಗಿಂದಾಗ್ಗೆ ಪಠ್ಯವಿಷಯಗಳನ್ನು, ಶಿಕ್ಷಣ ಪದ್ಧತಿಗಳನ್ನು ಮತ್ತು ಪರೀಕ್ಷಾಕ್ರಮಗಳನ್ನು ಬದಲಾಯಿಸಲಾಗಿದೆ. ಅರ್ಧವಾರ್ಷಿಕ ಪದ್ಧತಿಗಳಂತಹ (semester system) ಅಮೆರಿಕಾ ದೇಶದ ಶಿಕ್ಷಣ ಪದ್ಧತಿಯನ್ನು ವಿಶ್ವವಿದ್ಯಾನಿಲಯಗಳಲ್ಲಿ ದೇಶದಲ್ಲೆಲ್ಲಾ ಜಾರಿಗೆ ತರಲಾಗಿದೆ. ಆದರೆ ಪರಿಣಾಮ ಆ ದೇಶದಲ್ಲಿ ಆದಂತೆ ಇಲ್ಲ. ಪದ್ಧತಿ ಯಾವುದೇ ಆದರೂ ಅದನ್ನು ಜಾರಿಗೆ ತರುವ ವ್ಯಕ್ತಿಗಳು ಹಿಂದೆ ಇದ್ದವರೇ. ಒಮ್ಮೆ, ನಮ್ಮ ಪ್ರಥಮ ಪ್ರಧಾನ ಮಂತ್ರಿಗಳಾದ ಪಂಡಿತ್ ಜವಹರ್‌ಲಾಲ್ ನೆಹರೂ ಅವರು, ಅಮೆರಿಕಾ ದೇಶದಲ್ಲಿ ವರ್ತಮಾನ ಪತ್ರಿಕೆಗಳನ್ನು ಒಂದೆಡೆ ಜೋಡಿಸಿ ಇಟ್ಟು, ಪಕ್ಕದಲ್ಲಿ ಒಂದು ಡಬ್ಬ ಇಟ್ಟಿರುವುದನ್ನು ಕಂಡರು. ಅವನ್ನು ಮಾರುವವರು ಯಾರೂ ಇರಲಿಲ್ಲ. ಬೇಕಾದವರು ಪತ್ರಿಕೆಯನ್ನು ತೆಗೆದುಕೊಂಡು ಡಬ್ಬದಲ್ಲಿ ಹಣ ಹಾಕಿ ಹೋಗುತ್ತಿರುವುದನ್ನು ಕಂಡು ನಮ್ಮ ದೇಶದಲ್ಲಿಯೂ ಹೀಗೆ ಮಾಡಬೇಕೆಂಬ ಆಸೆಯಿಂದ ದೇಶದ ರಾಜಧಾನಿಯಾದ ನವದೆಹಲಿಯಲ್ಲಿ ಪ್ರಯೋಗ ಮಾಡಿದರು. ದಿನಪತ್ರಿಕೆಯ ರಾಶಿ ಕ್ಷಣಾರ್ಧದಲ್ಲಿ ಕರಗಿತು, ಆದರೆ ಹಣದ ಡಬ್ಬ ಖಾಲಿಯಾಗಿಯೇ ಇತ್ತು! ಕೇವಲ ಪದ್ಧತಿ ನಿರೀಕ್ಷಿತ ಪರಿಣಾಮವನ್ನು ತರಲಾರದು. ಅದನ್ನು ಅನುಸರಿಸುವ ವ್ಯಕ್ತಿಗಳ ಮೇಲೆ ಅದರ ಪರಿಣಾಮ ಅವಲಂಬಿಸಿರುವುದು. ಎರಡನೆಯದಾಗಿ, ಒಂದು ಪದ್ಧತಿಯನ್ನು ಮಾರ್ಪಾಡು ಮಾಡಬೇಕಾದರೆ, ಮುಂಚೆ ಅದನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಬೇಕು. ಯಾವ ಅಂಶವನ್ನು ಬಿಡಬೇಕು ಮತ್ತು ಯಾವ ಅಂಶವನ್ನು ಹೊಸದಾಗಿ ಸೇರಿಸಬೇಕು ಎಂಬ ವಿವೇಚನೆ ಬೇಕಾಗುವುದು. ಯಾವುದನ್ನು ನಾವು "ಹೊಸದು" ಎಂದು ಕರೆಯುವೆವೊ ಅದರಲ್ಲಿ ಬಹುಭಾಗ ಹಳೆಯದು; ಸ್ವಲ್ಪಭಾಗ ಹೊಸದು. ವಿಕಾಸದ ಹಾದಿ ಇರುವುದೇ ಹೀಗೆ, ಕಣಕಣವಾಗಿ ಬೆಳವಣಿಗೆ ಆಗುವುದು. "ಕ್ರಾಂತಿ" ಎಂದರೆ ಇರುವ ವ್ಯವಸ್ಥೆಯನ್ನು ಕದಡುವುದು. ಅದು ಬೆಳವಣಿಗೆಯಲ್ಲ. ಕದಡಿದ್ದು ತಿಳಿಯಾಗುವವರೆಗೆ ಕಾಯಬೇಕಾಗುವುದು. ಹೋದದ್ದನ್ನು ಮರೆತು ಬಂದದ್ದನ್ನು ತೆಗೆದುಕೊಳ್ಳಬೇಕಾಗುವುದು. ಹಳೆಯದರಲ್ಲಿ ಒಂದು ಸಣ್ಣ ಬದಲಾವಣೆಯನ್ನು ಮಾಡಿದರೂ ಒಟ್ಟಾರೆ ದೃಷ್ಟಿಯಿಂದ ಅದು ವಿನೂತನವಾಗಿ ಕಾಣುವುದು. ಆದುದರಿಂದಲೇ ಬದಲಾವಣೆಗಳನ್ನು ಮಾಡುವವರು ಅನುಭವಶಾಲಿಗಳೂ, ನುರಿತವರೂ, ದೂರದೃಷ್ಟಿಯುಳ್ಳವರೂ ಆಗಿದ್ದರೆ ಬದಲಾವಣೆ ಪ್ರಯೋಜನಕರವಾಗಿ ಸ್ಥಾಯಿಯಾಗುವುದು. ಶಿಕ್ಷಣ ಪದ್ಧತಿಗಳು ಯಾವುದೇ ಆಗಿದ್ದರೂ, ಯಾವ ದೇಶಕ್ಕೇ ಸೇರಿದ್ದರೂ ಅವುಗಳ ಹಿಂದಿರುವ ಮೂಲತತ್ತ್ವಗಳು ಒಂದೇ. ಅವನ್ನು ತಿಳಿಯಬೇಕಾದುದು ಮುಖ್ಯ.

### ಶಿಕ್ಷಣ

ವಿದ್ಯಾಭ್ಯಾಸವೆಂದರೆ ಶಾಲೆಗೆ ಹೋಗುವುದು, ಪರೀಕ್ಷೆಗಾಗಿ ಓದುವುದು, ವೃತ್ತಿಗಾಗಿ ಪದವಿಗಳನ್ನು ಪಡೆಯುವುದು ಎಂಬ ಆಲೋಚನೆ ಸಾಮಾನ್ಯವಾಗಿ ಎಲ್ಲೆಲ್ಲೂ ಹರಡಿರುವುದು. ಮಕ್ಕಳು ಸರಿಯಾಗಿ ಓದುತ್ತಿಲ್ಲವೆಂದು ತಂದೆತಾಯಿಗಳು ಇತರರೊಂದಿಗೆ ದೂರುವಾಗ, ಮುಖ್ಯವಾದ ಪಬ್ಲಿಕ್ ಪರೀಕ್ಷೆ ಇರುವುದು, ಅದರಲ್ಲಿ ಸಾಕಷ್ಟು ಅಂಕಗಳನ್ನು ಗಳಿಸದಿದ್ದರೆ ಒಳ್ಳೆಯ ಶಾಲೆಯಲ್ಲಿ ಸರ್ಕಾರಿ ಕೋಟಾದಲ್ಲಿ ಸೀಟು ಸಿಗುವುದಿಲ್ಲ, ನಂತರ ಭಾರಿ ಹಣದ ಹುದ್ದೆ ದೊರೆಯುವುದಿಲ್ಲ ಎಂಬ ವ್ಯಸನವಿರುವುದು. ಮುಂದೆ ಸಂಪಾದನೆ ಪ್ರಾರಂಭವಾದ ಮೇಲೆ, ಹಣ ನೋಡಿ ತಂದೆತಾಯಿಗಳಿಗೆ ಸಂತೋಷವಾಗುವುದು, ಆದರೆ ಕೆಲಸವನ್ನು ಸಮರ್ಪಕವಾಗಿ ಸಮರ್ಥವಾಗಿ ಮಾಡಲಾಗುತ್ತಿಲ್ಲ ಎಂದು ಕೆಲಸಕ್ಕೆ ಸೇರಿರುವವರು ಕಷ್ಟಪಡುತ್ತಿರುವರು. ವಿದ್ಯಾಭ್ಯಾಸವೆಂದರೆ ಕೇವಲ ತಿಳಿಯುವುದಲ್ಲ, ಅದು ಕಲಿಯುವುದು. ಒಂದು ವಿಷಯವನ್ನು ಕಲಿಯುವುದೆಂದರೆ, ಅದರ ಬಗ್ಗೆ ತಿಳಿಯುವುದು ಮತ್ತು ಅದರಂತೆ ಮಾಡುವುದು—ಇವೆರಡೂ ಸೇರಿವೆ. ನನಗೆ ಎಲೆಕ್ಟ್ರಿಸಿಟಿ ಬಗ್ಗೆ ಗೊತ್ತಿದೆ, ಆದರೆ ಸ್ವಿಚ್ ರಿಪೇರಿ ಮಾಡಲಾರೆ ಎನ್ನುವವರಿಗೆ ಸಾಧಾರಣವಾದ ಕೆಲಸವೂ ಸಿಗುವುದಿಲ್ಲ. ಶಿಕ್ಷಣ ಎಂದರೆ ತರಬೇತಿ. ತಿಳಿಯುವುದು ಮಾಡುವುದಕ್ಕಾಗಿ. ಅಡುಗೆ ಮಾಡುವ ವಿಧಾನವನ್ನು ಮಾತ್ರ ತಿಳಿದವನು ಹಸಿವಿನಿಂದ ಪಾರಾಗಲಾರ. ಅಡುಗೆ ಮಾಡಬೇಕು. ಉಪಯೋಗಿಸಿದಾಗಲೇ ಜ್ಞಾನದ ಪ್ರಯೋಜನ ಜೀವನಕ್ಕೆ ಆಗುವುದು. ಶಾಲೆಯಲ್ಲಿ ಬೋಧಿಸುವ ಪ್ರತಿಯೊಂದು ಪಾಠಕ್ಕೂ ಉಪಯೋಗಗಳಿವೆ. ಉಪಾಧ್ಯಾಯರು ವಿದ್ಯಾರ್ಥಿಗಳಿಗೆ ಕೊಡುವ ಅಭ್ಯಾಸ ಮತ್ತು ಪ್ರಾಯೋಗಿಕ ತರಗತಿಗಳಲ್ಲಿ ಮಾತ್ರವೇ ಇದು ಗೊತ್ತಾಗುವುದು. ವೃತ್ತಿಗಾಗಿ ನಾವು ಯಾವ ಸಂಸ್ಥೆಗೆ ಹೋದರೂ, ನಾವು ಶಾಲೆಯಲ್ಲಿ ಪಡೆದಿರುವ ಶಿಕ್ಷಣ—ಸಾಮಾನ್ಯ ಅಥವಾ ವಿಶೇಷ—ಯಾವ ರೀತಿ ಆ ಸಂಸ್ಥೆಗೆ ಉಪಯೋಗವಾಗುವುದೆಂದು ಅವರು ಕೇಳುವರು.

### ವಿದ್ಯಾಭ್ಯಾಸ ಮತ್ತು ನಿತ್ಯ ಜೀವನ

ಜೀವನಕ್ಕೆ ಉಪಯೋಗವಾಗದ ವಿದ್ಯೆ ವ್ಯರ್ಥ. ಜ್ಞಾನಾಭಿವೃದ್ಧಿಯ ಜತೆಗೆ ನಮ್ಮ ನಡೆ-ನುಡಿಯಲ್ಲಿಯೂ ವಿದ್ಯಾಭ್ಯಾಸದ ಪರಿಣಾಮ ವ್ಯಕ್ತವಾಗಬೇಕು. ಮುಂದೆ ಹೋಗುತ್ತಿರುವವರನ್ನು ಕರೆಯಲು ನಮ್ಮ ವಿದ್ಯಾರ್ಥಿಗಳು ಸಿಳ್ಳು ಹೊಡೆಯುವರು. ದಾರಿಯಲ್ಲಿ ಮಾರುವ ಸೀಬೆಕಾಯಿ, ಸೇಬು, ದ್ರಾಕ್ಷಿ ಮುಂತಾದ

ಹಣ್ಣುಗಳನ್ನು ತೊಳೆಯದೆ ತಿಂದು ರೋಗಗಳಿಗೆ ತುತ್ತಾಗುವರು. ಹಾಲಿನ ಪೋಷಕಾಂಶಗಳ ಬಗ್ಗೆ ಆಹಾರ ವಿಜ್ಞಾನದಲ್ಲಿ (food science) ಪಿಎಚ್.ಡಿ ಮಾಡಿರುವವರು ಹಾಲನ್ನು ಸೇವಿಸದೆ, ಪೌಷ್ಟಿಕಾಂಶದ ಕೊರತೆಯಿಂದ ನರಳುವರು. ವಿದ್ಯಾರ್ಥಿಗಳ ಸಂಭಾಷಣೆಗೂ, ಶಾಲೆಯ ಕಟ್ಟೆ ಹತ್ತದವರ ಭಾಷೆಗೂ ವ್ಯತ್ಯಾಸ ಕಾಣುವುದಿಲ್ಲ. ಶಾಲಾ ಕಾಲೇಜುಗಳಲ್ಲಿ ಅವರಿಗೇನಾದರೂ ಸಮಸ್ಯೆಗಳು ಬಂದರೆ, ಸಂಬಂಧಪಟ್ಟ ಅಧಿಕಾರಿಗಳಿಗೆ ತಮ್ಮ ತೊಂದರೆಗಳನ್ನು ಬರೆದು ತಿಳಿಸುವ ಬದಲು, ಶಾಲೆಯ ಕಿಟಕಿಯ ಗಾಜನ್ನು ಒಡೆಯುವರು. ವಿದ್ಯಾಭ್ಯಾಸ ಅವರ ಮೇಲೆ ಪರಿಣಾಮವನ್ನುಂಟುಮಾಡಿಲ್ಲ, ಅವರ ಜೀವನವನ್ನು ಪ್ರವೇಶಿಸಿಲ್ಲ ಎಂದು ಇದರಿಂದ ವಿದಿತವಾಗುವುದು. ನಾಗರಿಕತೆ ಎಂದರೆ ಕೇವಲ ಸ್ವಚ್ಛಂದತೆಯಲ್ಲ, ವಿಚಾರದಲ್ಲಿ ಸ್ವಚ್ಛಂದತೆ. ಉತ್ತಮ ಪ್ರಜೆ, ಎಂದರೆ ಯಾರು ಇತರರಿಗೆ ತೊಂದರೆ ಕೊಡದೆ ಜೀವಿಸುವರೋ ಅವರು. ನಾಗರಿಕ ವಿದ್ಯಾರ್ಥಿಗಳೇ ಮುಂದೆ ಉತ್ತಮ ಪ್ರಜೆಗಳಾಗುವವರು.

## ವಿದ್ಯಾಭ್ಯಾಸ ನಾಳೆಗೆ

ಶಾಲಾ ವಿದ್ಯಾಭ್ಯಾಸ ಇಂದಿಗಲ್ಲ, ಮುಂದಿನ ಜೀವನಕ್ಕೆ. ಇಂದು ಹೇಳಿಕೊಡುವ ಪಾಠ, ನಂತರದ ಪಾಠಗಳಿಗೆ ಆಧಾರವಾಗುವಂತೆ ಇಂದಿನ ವಿದ್ಯಾಭ್ಯಾಸ ಮುಂದಿನ ಜೀವನದ ಉಪಯೋಗಕ್ಕಾಗಿ ಇರುವುದು. ಅಂದು ಕಲಿತ ಪಾಠ ಅಂದೇ ಉಪಯೋಗಕ್ಕೆ ಬರುವುದಿಲ್ಲ. ನಂತರದ ಜೀವನದಲ್ಲಿ ಅನಿರೀಕ್ಷಿತ ರೀತಿಯಲ್ಲಿ, ಊಹಿಸಲಾಗದ ಸಂದರ್ಭಗಳಲ್ಲಿ ಉಪಯೋಗಕ್ಕೆ ಬರುವುದನ್ನು ನೋಡಿ ನಾವು ಅಚ್ಚರಿ ಪಡುವೆವು, ಮತ್ತು ಉಪಾಧ್ಯಾಯರುಗಳನ್ನು ಕೃತಜ್ಞತೆಯಿಂದ ಸ್ಮರಿಸುವೆವು. ನಮ್ಮ ದೇಶದ ಭೂಸೇನಾಧಿಪತಿಗಳಾಗಿದ್ದ ಜನರಲ್ ಸುಂದರ್‌ಜಿಯವರು ಅಧಿಕಾರ ವಹಿಸಿಕೊಂಡ ನಂತರ ಪ್ರಥಮ ಬಾರಿಗೆ ಮದರಾಸ್ ನಗರಕ್ಕೆ ಬಂದಾಗ ಅವರು ಮೊದಲು ಭೇಟಿ ನೀಡಿದುದು ಅವರ ಹೈಸ್ಕೂಲ್ ಉಪಾಧ್ಯಾಯರ ಮನೆಗೆ! ಅಮೆರಿಕಾದ ಸ್ಕೂಲ್ ಉಪಾಧ್ಯಾಯರೊಬ್ಬರು ತಲೆಬಾಗಿ ವಂದಿಸಿ ನಂತರ ತರಗತಿಯನ್ನು ಪ್ರವೇಶಿಸುತ್ತಿದ್ದರಂತೆ. ಕಾರಣವನ್ನು ಕೇಳಲಾಗಿ, ತರಗತಿಯಲ್ಲಿರುವ ವಿದ್ಯಾರ್ಥಿಗಳಲ್ಲಿ ಯಾರು ನಂತರದ ಜೀವನದಲ್ಲಿ ಮಹಾನ್ ವ್ಯಕ್ತಿಗಳಾಗುವರೊ ಹೇಳಲಾಗದು, ಆದುದರಿಂದ ಅವರಿಗೆ ವಂದಿಸುವೆನು ಎಂದರಂತೆ. ಆ ತರಗತಿಯಲ್ಲಿದ್ದ ಒಬ್ಬ ವಿದ್ಯಾರ್ಥಿಯೇ ಮುಂದೆ "ಅಮೆರಿಕದ ಗಾಂಧಿ" ಎಂದು ಪ್ರಸಿದ್ಧರಾದ ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್ ಎಂಬುವರು! ಮೈಸೂರಿನ ಪ್ರಸಿದ್ಧ ಗಾಯಕರೂ, ಶ್ರೇಷ್ಠ ವಾಗ್ಗೇಯಕಾರರೂ ಆದ ವಾಸುದೇವಾಚಾರ್ಯರು ತಮ್ಮ ಸಹಪಾಠಿಗಳೂ ಗುರುಭಾಯಿಗಳೂ ಆದ ಪೂಚ್ಚಿ ಶ್ರೀನಿವಾಸ ಅಯ್ಯಂಗಾರರನ್ನು ನೋಡಲು ರಾಮನಾಥಪುರಕ್ಕೆ ಹೋದಾಗ ಅಯ್ಯಂಗಾರ್ಯರು ಶಿಷ್ಯರಿಗೆ ಪಾಠ ಹೇಳುತ್ತಿದ್ದರಂತೆ. ಅವರಲ್ಲಿ ಯಾರಿಗೆ ಗಾಯನ ಪ್ರತಿಭೆ ಇರುವಂತೆ ತೋರುವುದು ಎಂದು ಅವರು ಕೇಳಿದಾಗ ವಾಸುದೇವಾಚಾರ್ಯರು ಒಬ್ಬ ಬಾಲಕನ ಕಡೆ ಕೈತೋರಿಸಿದರಂತೆ. ಅವರೇ ಮುಂದೆ, ಆಧುನಿಕ ಕಛೇರಿ ಪದ್ಧತಿಯ ಪಿತಾಮಹರೆಂದು ಮೆರೆದ ಅರಿಯಾಕುಡಿ ರಾಮಾನುಜ ಅಯ್ಯಂಗಾರ್ಯರು! ಪಾಠಗಳನ್ನು ಕಲಿಯುತ್ತಿದ್ದಂತೆಯೇ ಯಾರೂ ಸಂಗೀತ ವಿದ್ವಾಂಸರಾಗುವುದಿಲ್ಲ, ವಿಜ್ಞಾನಿಗಳಾಗುವುದಿಲ್ಲ. ಯಾವ ಶಿಕ್ಷಣವೂ ಇಂದಿಗಲ್ಲ, ನಾಳೆಗೆ.

## ಉತ್ತಮ ವಿದ್ಯಾರ್ಥಿಗಳು

ವಿದ್ಯಾರ್ಥಿ ಎಂಬ ಪದಕ್ಕೆ ಜ್ಞಾನವನ್ನು ಅರಸುವವರು ಎಂದು ಅರ್ಥ. ಜ್ಞಾನಾರ್ಜನೆಯೇ ವಿದ್ಯಾರ್ಥಿಗಳ ಗುರಿ. ಸತ್ಯಾಕಾಂಕ್ಷಿಗಳಾಗುವುದೇ ಉನ್ನತ ಶಿಕ್ಷಣವನ್ನು ಪಡೆಯುವುದರ ಉದ್ದೇಶ. ಉತ್ತಮ ವಿದ್ಯಾರ್ಥಿಗಳು ಎಂದರೆ ಯಾರು ಎಂಬ ಪ್ರಶ್ನೆಯನ್ನು ತರಗತಿಗಳಲ್ಲಿ ಕೇಳಿದರೆ, ಯಾರು ಉಪಾಧ್ಯಾಯರಿಗೆ ವಿಧೇಯರಾಗಿರುವರೊ ಅವರು ಎಂಬ ಉತ್ತರ ಸಾಮಾನ್ಯವಾಗಿ ಬರುವುದು. ಇದನ್ನು ಎಲ್ಲಾ ವಿದ್ಯಾರ್ಥಿಗಳೂ ಅನುಮೋದಿಸುವುದೂ ಇಲ್ಲ. ವಿದ್ಯಾರ್ಥಿಗಳು ವಿಧೇಯರಾಗಿರಬೇಕಾದುದು ಉಪಾಧ್ಯಾಯರಿಗಲ್ಲ, ಅವರ ನಿರ್ದೇಶನಗಳಿಗೆ. ಅವರು ಹೇಳಿಕೊಟ್ಟ ಪಾಠಗಳು ವಿದ್ಯಾರ್ಥಿಗಳ ಅನುಭವಕ್ಕೆ ಬರಬೇಕಾದರೆ ಅವರು ಕೆಲವು ಅಭ್ಯಾಸಗಳನ್ನು ಮಾಡಬೇಕೆಂದು ಉಪಾಧ್ಯಾಯರು ವಿಧಿಸುವರು. ಅವನ್ನು ಪ್ರಾಮಾಣಿಕತೆಯಿಂದ ತಡವಿಲ್ಲದೆ ಯಾರು ಮಾಡುವರೊ ಅವರಿಗೆ ಮಾತ್ರವೇ ಜ್ಞಾನ ಅನುಭವವಾಗುವುದು ಮತ್ತು ಮುಂದಿನ ಪಾಠ ಸರಿಯಾಗಿ ಅರ್ಥವಾಗುವುದು. ವಿದ್ಯಾರ್ಥಿಗಳು ವಿದ್ಯಾಸಂಸ್ಥೆಗಳಿಂದ ಪಡೆಯಬೇಕಾಗಿರುವುದು ನಿಖರವಾದ ಜ್ಞಾನ ಮತ್ತು ಖಚಿತವಾದ ಅನುಭವ. ಅದಕ್ಕಾಗಿ ಯಾರು ಉಪಾಧ್ಯಾಯರ ಸೂಚನೆ, ನಿರ್ದೇಶನ, ವಿಧಿವಿಧಾನಗಳಿಗೆ ಬದ್ಧರಾಗುವರೊ ಅವರೇ ಉತ್ತಮ ವಿದ್ಯಾರ್ಥಿಗಳು. ಅವರಿಗೆ ಮಾತ್ರವೇ ಸಾರ್ಥಕವಾದ ಜ್ಞಾನ ಪ್ರಾಪ್ತವಾಗುವುದು.

## ಶಿಕ್ಷಣದಲ್ಲಿ ಪ್ರಜಾಪ್ರಭುತ್ವವಿಲ್ಲ

ಏನನ್ನು ಮಾಡಿದರೆ ಜ್ಞಾನದ ಸಾರ, ಮರ್ಮ, ವಿದ್ಯಾರ್ಥಿಗಳಿಗೆ ವೇದ್ಯವಾಗುವುದೊ ಅದನ್ನು ಶಿಕ್ಷಕರು ವಿಧಿಸುವರು. ಅವನ್ನು ಪಠ್ಯ ಪುಸ್ತಕಗಳಲ್ಲಿ ಕೆಲವು ವೇಳೆ ಅಭ್ಯಾಸದಂತೆ ಕೊಟ್ಟಿರುವರು. ಇದನ್ನು ಹೀಗೆಯೇ ಮಾಡಿ ಎಂದು ನುರಿತ ಉಪಾಧ್ಯಾಯರು ಆದೇಶಿಸುವರು. ಅವರ ಆಜ್ಞೆಯನ್ನು ಪ್ರಶ್ನಿಸದೆ, ಸಂದೇಹಿಸದೆ ಅದಕ್ಕೆ ತಲೆಬಾಗಿ ನಡೆಯುವುದೇ ವಿದ್ಯಾರ್ಥಿಗಳ ಕರ್ತವ್ಯ ಮತ್ತು ಧರ್ಮ. ಇದನ್ನು ನಮ್ಮ ಶಾಸ್ತ್ರಗಳಲ್ಲಿ ಅಧಿಕಾರವಾದ ಎನ್ನುವರು. ಕರ್ನಾಟಕ ಸಂಗೀತದ ದಿಗ್ಗಜಗಳಲ್ಲೊಬ್ಬರಂತೆ ಇದ್ದ ಮೈಸೂರಿನ ಪಿಟೀಲು ಚೌಡಯ್ಯನವರ ಗುರುಗಳಾದ ಬಿಡಾರಂ ಕೃಷ್ಣಪ್ಪನವರು ಒಂದು ರಾಗವನ್ನು ಪಾಠ ಹೇಳಿಕೊಟ್ಟ ಮೇಲೆ ಅದನ್ನು ಚೌಡಯ್ಯನವರು ಸಂಪೂರ್ಣವಾಗಿ ಕಲಿತುಕೊಂಡಿರುವರೆಂದು ಗುರುಗಳು ಹೇಳುವವರೆಗೂ ದಿನವಿಡಿ ಅನೇಕ ದಿನಗಳು ಅದೊಂದನ್ನೇ ಅಭ್ಯಾಸ ಮಾಡಬೇಕಾಗು

ತ್ತಿತ್ತಂತೆ. ಅಮೆರಿಕದ ಮಿದುಳಿನ ಶ್ರೇಷ್ಠ ಶಸ್ತ್ರಚಿಕಿತ್ಸಕರೊಬ್ಬರು, ತಮ್ಮೊಡನೆ ಸಹಾಯಕರಾಗಿ ತರಪೇತಿ ಪಡೆಯುತ್ತಿದ್ದ ವೈದ್ಯ ಸ್ನಾತಕೋತ್ತರ ವಿದ್ಯಾರ್ಥಿಗಳು ಒಂದೇ ಕೈಯಿಂದ ಅತ್ಯಂತ ಸೂಕ್ಷ್ಮವಾದ ರಕ್ತನಾಳಗಳನ್ನು ಅವು ಒಡೆಯದಂತೆ ಗಂಟು ಹಾಗುವುದನ್ನು, ಕೆಲವು ನಿಮಿಷಗಳಲ್ಲಿ ನೂರಾರು ಮಾಡಲು ಸಾಧ್ಯವಾಗುವವರೆಗೆ, ಮಿದುಳಿನ ಶಸ್ತ್ರಚಿಕಿತ್ಸೆಗೆ ವಿದ್ಯಾರ್ಥಿಗಳನ್ನು ಬಿಡುತ್ತಿರಲಿಲ್ಲವಂತೆ. ಶ್ರೀರಾಮಕೃಷ್ಣರ ಶಿಷ್ಯರೆಲ್ಲರೂ ಗುರುಗಳ ಮಾರ್ಗದರ್ಶನದಂತೆ ಸಾಧನೆ ಮಾಡುತ್ತಿದ್ದರು. ಅದರಲ್ಲಿ ಸ್ವಲ್ಪವೂ ಲೋಪವಾಗದಂತೆ ಶ್ರೀರಾಮಕೃಷ್ಣರು ಎಚ್ಚರ ವಹಿಸುತ್ತಿದ್ದರು. ಗುರುಗಳ ಉಪದೇಶಕ್ಕೆ ವಿಧೇಯರಾಗಿದ್ದರೆ ಗುರುಗಳ ಜ್ಞಾನ ಮತ್ತು ಅನುಭವ ಶಿಷ್ಯರಿಗೆ ಹರಿದು ಬರುವುದು. ಈ ರಹಸ್ಯವನ್ನು ಭಾರತೀಯ ಋಷಿಗಳು, ದಾರ್ಶನಿಕರು ಬಹಳ ಹಿಂದೆಯೇ ಕಂಡುಕೊಂಡಿದ್ದರು. ಯಾರ ಜ್ಞಾನ ಮತ್ತು ಅನುಭವ ನಮ್ಮದಾಗಬೇಕೆಂದು ಬಯಸುವೆವೊ ಅವರ ಉಪದೇಶಗಳನ್ನು ನಾವು ಪ್ರಾಮಾಣಿಕತೆಯಿಂದ ಶ್ರದ್ಧೆಯಿಂದ ಕಾಯಾ ವಾಚಾಮನಸಾ ಸ್ವೀಕರಿಸಬೇಕು. ಆದುದರಿಂದಲೇ ಶಿಕ್ಷಣದಲ್ಲಿ ಪ್ರಜಾಪ್ರಭುತ್ವವಿಲ್ಲ, ಕೇವಲ ಗುರುಗಳ ಅಧಿಕಾರ ಇರುವುದು ಎಂದು ತಜ್ಞರು ಹೇಳಿರುವುದು.

### ಕುತೂಹಲ ಜ್ಞಾನಕ್ಕೆ ದಾರಿ

ನಿರಕ್ಷರಕುಕ್ಷಿಗಳು ಎಂದರೆ ಯಾರು? ಓದು ಬರೆಹ ಬಾರದವರಲ್ಲ, ಯಾರಿಗೆ ಕುತೂಹಲ ಇಲ್ಲವೊ ಅವರು ಎಂಬ ಸ್ವಾರಸ್ಯಕರವಾದ ಹೇಳಿಕೆಯೊಂದಿದೆ. ನಾವು ಏನನ್ನಾದರೂ ತಿಳಿಯಲು ಪ್ರಯತ್ನಿಸುವುದಕ್ಕೆ ಕುತೂಹಲವೇ ಪ್ರೇರಣೆ. ನಮಗೆ ಯಾವುದರ ಬಗ್ಗೆ ಕುತೂಹಲವಿದೆಯೊ ಅದನ್ನು ತಿಳಿಯಲು ತವಕಿಸುತ್ತೇವೆ. ಕೆಲವರಿಗೆ ಚುನಾವಣೆಯ ಫಲಿತಾಂಶದ ಬಗ್ಗೆ, ಕೆಲವರಿಗೆ ಇತ್ತೀಚಿನ ಕ್ರಿಕೆಟ್ ಸ್ಕೋರಿನ ಬಗ್ಗೆ ಕುತೂಹಲ ಇರುವಂತೆ ಇದು. ನಮಗೆಲ್ಲರಿಗೂ ಸಾಮಾನ್ಯವಾಗಿ ಇತರರ ಬಗ್ಗೆ ಕುತೂಹಲ ಇರುವುದು. ಅದನ್ನು ಜ್ಞಾನಾರ್ಜನೆಯಲ್ಲಿ ತೋರಿಸಬೇಕು, ಅಷ್ಟೆ. ಶ್ರೀರಾಮಕೃಷ್ಣರು ಅತ್ಯಂತ ಕುತೂಹಲಿಗಳಾಗಿದ್ದುದನ್ನು ನೋಡುವೆವು. ಅವರಂತಹ ವಿದ್ಯಾರ್ಥಿಗಳನ್ನು ಪ್ರಪಂಚದಲ್ಲಿ ನೋಡಲಾರೆವು. ಅವರಿಗೆ ಮನಸ್ಸಿಗೆ ಅತ್ಯಂತ ಸಮೀಪವಾದ, ಪ್ರಿಯವಾದ ವಸ್ತುವೆಂದರೆ ಭಗವಂತ. ಆದುದರಿಂದಲೇ ಅವರು ಅಷ್ಟು ಅಲ್ಪ ಕಾಲದಲ್ಲಿ ಪ್ರಪಂಚದಲ್ಲಿ ಆಗ ಇದ್ದ ಎಲ್ಲಾ ಧರ್ಮಗಳನ್ನೂ ಅಭ್ಯಸಿಸಿ ಅವುಗಳ ಸಾರವನ್ನು ಮೈಗೂಡಿಸಿಕೊಂಡರು. ಗೀತೆಯ ಸಾರ ಅವರಿಗೆ ತಿಳಿದಿತ್ತು. ಬೈಬಲ್‌ನಲ್ಲಿ ಇಂತಹ ವಾಕ್ಯವಿದೆ, ನೋಡಿ ಎಂದು ಅವರು ಹೇಳಿದಾಗ, ಮಹಾ ಮೇಧಾವಿಯಾದ ಸ್ವಾಮಿ ವಿವೇಕಾನಂದರಂತಹವರೂ ಹಲವು ಬಾರಿ ಹಿಂದೆ ಮುಂದೆ ಅದನ್ನು ಹುಡುಕಬೇಕಾಯಿತು. ಮೇಧಾವಿಗಳಾದ ವಿಜ್ಞಾನಿಗಳು, ಕಲಾವಿದರು, ತತ್ತ್ವವೇತ್ತರು ಅವರಿಗೆ ಪ್ರಿಯವಾದ ವಿಷಯಗಳಲ್ಲಿ ಅತ್ಯಂತ ಕುತೂಹಲಿಗಳಾಗಿರುವುದನ್ನು ನೋಡುವೆವು. ಆದುದರಿಂದಲೇ ಅವರು ತಿಳಿಯಲು ಉತ್ಸುಕರಾಗಿ ಪ್ರಶ್ನೆಗಳನ್ನು ಕೇಳುವರು. ಇಂದು ಬಹಳ ಕಡೆ ತರಗತಿಗಳಲ್ಲಿ, ವಿಚಾರ ಸಮ್ಮೇಳನಗಳಲ್ಲಿ ಪ್ರಶ್ನೆ ಕೇಳುವವರೇ ವಿರಳ. ಯಾವ ವಸ್ತುವಿನ ಮೇಲೆ ನಮಗೆ ಆಸೆ ಇರುವುದೊ ಅದನ್ನು ಪಡೆಯಲು ಎಲ್ಲಾ ಪ್ರಯತ್ನವನ್ನೂ ಮಾಡುವೆವು. ಹಾಗೆ ಅದು ನಮಗೆ ಲಭಿಸುವುದು. ಜ್ಞಾನ ಯಾರಿಗೆ ಲಭಿಸುವುದು? ಯಾರಿಗೆ ಅದರ ಮೇಲೆ ಶ್ರದ್ಧೆ ಇದೆಯೋ, ಯಾರು ಅದನ್ನು ಪಡೆಯಲು ಶ್ರಮ ಪಡುವರೋ ಅವರಿಗೆ ಅದು ಲಭಿಸುವುದು ಎಂದು ಶ್ರೀಕೃಷ್ಣ ಭಗವದ್ಗೀತೆಯಲ್ಲಿ ಹೇಳಿರುವನು. (ಅಧ್ಯಾಯ ೪, ಶ್ಲೋಕ ೩೯). ಇದು ಎಲ್ಲ ಬಗೆಯ ವಿದ್ಯೆಗಳ ವಿಷಯದಲ್ಲಿಯೂ, ಎಲ್ಲ ದೇಶಗಳಲ್ಲಿಯೂ, ಎಲ್ಲ ಕಾಲದಲ್ಲಿಯೂ ನಿಜ. ವಿದ್ಯಾರ್ಥಿಗಳು ಜ್ಞಾನದ ಕಾಂತಿಯಿಂದ ಹೊಳೆಯಬೇಕು, ರಾಜಕಾರಣಿಗಳಂತೆ ಕ್ಯಾಮರಾದ ವಿದ್ಯುದ್ದೀಪಗಳ ಕಾಂತಿಪುಂಜದಿಂದಲ್ಲ.

*(ಮುಂದುವರಿಯುತ್ತದೆ.)*

### ಕಷ್ಟದ ಪ್ರಯೋಜನ ಪಡೆಯಿರಿ

ಒಮ್ಮೆ ಕತ್ತೆಯೊಂದು ಆಕಸ್ಮಿಕವಾಗಿ ನೀರಿಲ್ಲದ ಹಾಳು ಬಾವಿಯಲ್ಲಿ ಬಿದ್ದು ಜೋರಾಗಿ ಕಿರುಚಿಕೊಳ್ಳತೊಡಗಿತು. ಕತ್ತೆಯ ಯಜಮಾನನು ಓಡಿಬಂದನು. ಅದು ಮುದಿ ಕತ್ತೆ. ಬಾವಿಯೂ ನೀರಿಲ್ಲದ್ದು. ಕತ್ತೆ ಸಮೇತ ಬಾವಿಯನ್ನು ಮುಚ್ಚಿಬಿಡುವುದೇ ಒಳ್ಳೆಯದೆಂದು ಆತ ಭಾವಿಸಿದ.

ಊರಿನವರನ್ನೆಲ್ಲ ಕರೆಸಿ ಬಾವಿ ಮುಚ್ಚಿಸತೊಡಗಿದ. ಎಲ್ಲರೂ ಕಸ ಮಣ್ಣು ತಂದು ಬಾವಿಗೆ ಎಸೆಯತೊಡಗಿದರು. ಪ್ರಾರಂಭದಲ್ಲಿ ಕತ್ತೆಯು ಮತ್ತೂ ಜೋರಾಗಿ ಕಿರಿಚಿಕೊಳ್ಳತೊಡಗಿತು. ಸ್ವಲ್ಪ ಹೊತ್ತಿನ ನಂತರ ಅದರ ಸದ್ದಡಗಿತು. ಕತ್ತೆಯ ಯಜಮಾನ ಏನು ಸಮಾಚಾರ ಎಂದು ನೋಡಲು ಬಾವಿಯಲ್ಲಿ ಇಣಿಕಿ ನೋಡಿದ.

ಅವನು ಕಂಡ ದೃಶ್ಯ ಅವನನ್ನು ಚಕಿತಗೊಳಿಸಿತು. ಜನರು ಕಸ ಮಣ್ಣನ್ನು ಕತ್ತೆಯ ಮೇಲೆ ಸುರಿದಂತೆಲ್ಲ ಅದು ಅದನ್ನು ಕೊಡವಿಕೊಂಡು ಅದರ ಮೇಲೆ ಹತ್ತಿ ನಿಲ್ಲುತ್ತಿತ್ತು. ಹೀಗೆ ಜನ ಕಸ ಸುರಿದಂತೆಲ್ಲ ಕತ್ತೆ ಮೇಲಕ್ಕೆ ಏರತೊಡಗಿತು. ಬಾವಿಯ ಅಂಚಿಗೆ ಬರುತ್ತಿದ್ದಂತೆಯೇ ಕತ್ತೆ ಚಂಗನೆ ನೆಗೆದು ಓಡಿ ಹೋಯಿತು.

**ನಾವೂ ಜೀವನದಲ್ಲಿ ಬರುವ ಕಷ್ಟಗಳನ್ನು ಕೊಡವಿ ಮೇಲೇರಬೇಕು. ಅವೂ ನಮ್ಮ ಪ್ರಗತಿಯ ಸೋಪಾನವಾಗಬೇಕು. ಅವುಗಳನ್ನು ಧೈರ್ಯವಾಗಿ ಎದುರಿಸದೆ ಕುಗ್ಗಿಹೋದರೆ, ನಾವು ಕಷ್ಟಕೂಪದಲ್ಲಿ ಮುಳುಗಿಹೋಗುತ್ತೇವೆ.**